ಸಮಯ ರಾತ್ರಿಯಾಯಿತೆಂದರೆ ಹಿಂಡುತ್ತದೆ. ನಿದ್ದೆಯಿಲ್ಲದೆ ಹೊರಳಾಡುವಾಗ ಮಧ್ಯಾಹ್ನದ ಊಟ ಹೊಟ್ಟೆಯಲ್ಲಿ ಸುತ್ತುತ್ತದೆ.

ನೆನಪಾಗುತ್ತದೆ. ಎಷ್ಟುಸಲ ಬ್ರಾಹ್ಮಣಾರ್ಥದ ಮನೆಯಲ್ಲಿ ಎಲೆಯ ಮುಂದೆ ಕುಳಿತು ಸಾರನ್ನ ಕಲಿಸುವಾಗ ಮಕ್ಕಳ ನೆನಪು ಒತ್ತಿ ಬರಲು ಪ್ರಾರಂಭವಾಗಿ ಮುಂದೆ ಭಕ್ಷ್ಯದ ತಟ್ಟೆ ಬರುವಾಗ ತೀವ್ರವಾಗಿ, ಗಂಜಿ ತಿಂದು ಮನೆಯಲ್ಲಿ ತನ್ನ ಬರವನ್ನೇ ಕಾಯುತ್ತ ಕುಳಿತಿರುತ್ತಿದ್ದ ಮಕ್ಕಳ ಚಿತ್ರ ಕಣ್ಣಿಗೆ ಕಟ್ಟಿ ತುತ್ತು ಗಂಟಲಿನಲ್ಲಿ ಇಳಿಯದೇ ಇದ್ದಾಗ ಅತ್ತ ಆಪೋಶನ ತೆಗೆದುಕೊಂಡು ಏಳಲೂ ಆಗದೆ ಇತ್ತ ಊಟವನ್ನು ಮುಂದುವರಿಸಲೂ ಆಗದೆ ಕುಳಿತದ್ದು, ಮತ್ತೆ ಎಲ್ಲರ ಊಟ ಮುಗಿದಾದ ಮೇಲೆ ಹಿಂದಿನ ಬಾಗಿಲಿನಲ್ಲಿ ಹೋಗಿ ಮನೆಯ ಯಜಮಾನಿತಿಯ ಹತ್ತಿರ ಬೇಡಿ ಭಕ್ಷ್ಯಗಳನ್ನು ತೆಗೆದುಕೊಂಡು ಮನೆಯತ್ತ ಓಡಿ ಬರುತ್ತಿದ್ದುದು, ಅಲ್ಲಿ ತನಗಾಗಿ ಕಾದು ಕುಳಿತಿರುತ್ತಿದ್ದ ಮಕ್ಕಳಿಗೆ ತಾನು ತಂದಿದ್ದನ್ನು ಕೊಟ್ಟು ಆ ವಡೆಯನ್ನೋ ಸಿಹಿಯನ್ನೋ ಚೂರು ಚೂರಾಗಿ ಎಲ್ಲಿ ಬೇಗ ಖಾಲಿಯಾಗಿ ಬಿಡುತ್ತದೇನೋ ಎನ್ನುವ ಹೆದರಿಕೆಯಿಂದ ತಿನ್ನುತ್ತಿದ್ದ ಮಕ್ಕಳನ್ನು ನೋಡುತ್ತ ತನ್ನ ಹೊಟ್ಟೆಯೇ ತುಂಬಿತೇನೋ ಎಂದುಕೊಳ್ಳುತ್ತಿದ್ದುದು... ಎಲ್ಲ ನೆನಪು ಹೋಯಿತೇ ಮಾಣಿಗೆ?


ಮಗಳು ಬಂದು ಉಳಿಯುತ್ತಿದ್ದ ಎರಡು ದಿನಗಳಲ್ಲಿ ಇದನ್ನೆಲ್ಲ ನೆನಪಿಸುವುದಿತ್ತು. ಆ ಅಪ್ಪನ ನೆನಪನ್ನು ಕೆದಕುವುದರ ಜತೆಗೆ ‘ಎಷ್ಟು ದಿನ ಅಂತ ಹೀಗೆ ಒಂಟಿಯಾಗಿ ಇರುತ್ತೀರಿ ಅಪ್ಪ. ಅಮ್ಮ ಹೇಗೂ ಹೆಚ್ಚಾಗಿ ಅವನ ಮನೆಯಲ್ಲೇ ಇರುತ್ತಾಳೆ. ನೀವು ನಮ್ಮ ಮನೆಗೆ ಬನ್ನಿ. ಇದ್ದುದನ್ನು ಹಂಚಿಕೊಂಡು ತಿಂದರಾಯ್ತು’ ಎನ್ನುತ್ತಿದ್ದಳು. ಏನನ್ನು ಹಂಚಿಕೊಳ್ಳುವುದು. ಬಡತನವನ್ನೇ? ಚಳಿಗಾಲದ ದಿನಗಳಲ್ಲಿ ತಾನು ಬರೀ ಪಂಚೆ ಹೊದೆದುಕೊಂಡು ಉಸಿರುಕಟ್ಟಿ ದೇಹದ ಬಿಸಿಯನ್ನು ಹೆಚ್ಚಿಸಿಕೊಂಡು ಚಳಿಯನ್ನು ತಡೆಯಲು ಯತ್ನಿಸುತ್ತಿದ್ದಾಗ ಮುರುಟಿಕೊಂಡು ಮಲಗಿ ಅಮ್ಮನ ಸೀರೆಯ ಸೆರಗನ್ನೇ ಹಂಚಿಕೊಳ್ಳುತ್ತಿದ್ದರಲ್ಲ ಅಕ್ಕ ತಮ್ಮ... ಅವರಿಗೆ ಮನಸ್ಸು ಬರುವುದಿಲ್ಲ. ‘ಇಲ್ಲ ಮಗೂ ಅನುಕೂಲವೆನಿಸಿದಾಗ ನೀನೇ ಬಂದು ಹೋಗುತ್ತಿರು. ನಾನೂ ಅತ್ತ ಎಲ್ಲಾದರೂ ಬಂದರೆ ನಿನ್ನನ್ನು ನೋಡಿಕೊಂಡು ಬರುತ್ತೇನೆ. ಅದು ಬೇರೆ ಮಾಣಿ ಯಾವಾಗ ಅವಳನ್ನು ಬಿಟ್ಟು ಹೋಗಲು ಬರುತ್ತಾನೋ’ ಎನ್ನುತ್ತ ಕಣ್ಣೀರು ಹಾಕುತ್ತಿದ್ದ ಮಗಳನ್ನು ಬೀಳ್ಕೊಡುತ್ತಿದ್ದರು. ಅಪ್ಪನ ಸ್ವಭಾವ ಗೊತ್ತಿದ್ದ ಮಗಳೂ ಹೆಚ್ಚು ಒತ್ತಾಯಿಸುತ್ತಿರಲಿಲ್ಲ.

***

ಇವತ್ತಂತೂ ಬೆಳಿಗ್ಗೆ ಎದ್ದ ಹೊತ್ತಿನಿಂದಲೂ ವೆಂಕಪ್ಪಯ್ಯ ಮಗನ ನಿರೀಕ್ಷೆಯಲ್ಲಿಯೇ ಇದ್ದರು. ತಾಯಿಯನ್ನು ಕರೆದುಕೊಂಡ ಮಗ ಖಂಡಿತ ಇವತ್ತು ಬರುತ್ತಾನೆ ಅನ್ನಿಸುತ್ತಿತ್ತು ಅವರಿಗೆ. ಈ ಸಾರಿ ಹೇಳಿಬಿಡಬೇಕು ಅವಳಿಗೆ. `ಇದ್ದರೆ ಇನ್ನೆಷ್ಟು ದಿನ ಒಟ್ಟಿಗಿದ್ದೇವು. ಇನ್ನು ಮುಂದೆ ಮಗನ ಮನೆಗೆ ಹೋಗುವ ಸುದ್ದಿ ಎತ್ತಬೇಡ. ಕಷ್ಟವೋ ಸುಖವೋ ಇದ್ದಷ್ಟು ದಿನ ಒಟ್ಟಿಗೇ ಕಳೆಯೋಣ. ನಾನೂ ಹೊರಗಿನ ತಿರುಗಾಟವನ್ನು ಕಮ್ಮಿ ಮಾಡುತ್ತೇನೆ'. ಎಂದೆಲ್ಲ ಹೇಳಬೇಕೆಂದು ಲೆಕ್ಕ ಹಾಕುತ್ತಿದ್ದರು. ಹಾಗೆಯೇ ಮಗ ಆಕೆಯನ್ನು ಕರೆದುಕೊಂಡು ಬರುವ ಮಾಮೂಲಿ ದಾರಿಯನ್ನು ಪದೇ ಪದೇ ನೋಡುತ್ತಿದ್ದರು. ಜತೆ ಜತೆಯಲ್ಲಿಯೇ ಯಾಕೆ ಇನ್ನೂ ಬರಲಿಲ್ಲ ಎನ್ನುವ ಚಿಂತೆಯೂ ಕಾಡುತ್ತಿತ್ತು. ಏನೋ ವಿಶೇಷ ನಡೆದಿರಬೇಕು. ಇಲ್ಲದಿದ್ದರೆ ಖಂಡಿತ ಇಷ್ಟು ದಿನ ಇರುವವಳೆ ಅಲ್ಲ ಆಕೆ. ಅವತ್ತೊಮ್ಮೆ ಆಕೆಯೇ ಹೇಳಿದ್ದಳು. ಸೊಸೆ ತನ್ನನ್ನು ನಡೆಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ. ಅಲ್ಲಿ ನೆರೆ ಹೊರೆಯವರೆದುರಿಗೆ ಮತ್ತು ತನ್ನ ಗೆಳತಿಯರೆದುರಿಗೆ ಅವಹೇಳನ ಮಾಡುತ್ತಿದ್ದುದನ್ನು ವಿವರಿಸುತ್ತ ಕಣ್ಣೀರೊರೆಸಿಕೊಂಡಿದ್ದಳು. ‘ಮತ್ತೆ ಯಾಕೆ ಪದೇ ಪದೇ ಹೋಗುತ್ತೀಯ’ ಎಂದು ಇವರು ಕೇಳಿದರೆ `ಮಗನನ್ನು ನೋಡದೆ ಹೇಗೆ ಇರುವುದು ಅವನಿಗಾಗಿ ಎಲ್ಲವನ್ನೂ ಸಹಿಸಿಕೊಳ್ಳುವುದು’ ಎಂದಿದ್ದಳು. ಅವಳ ದೃಷ್ಟಿಯಲ್ಲಿ ಆ ಮಗನಿನ್ನೂ ಮಗುವೇ. ಜೊತೆಗೆ ಮದುವೆಯಾದಂದಿನಿಂದ ಆಕೆಗೆ ತಾನು ಕೊಟ್ಟ ಸುಖ ಇಂತಿಷ್ಟೆ ಎಂದು ಅರಿವಿದ್ದ ವೆಂಕಪ್ಪಯ್ಯ ಇದರಿಂದಲಾದರೂ ಅವಳಿಗೆ ತೃಪ್ತಿ ಸಿಗುವಂತಿದ್ದರೆ ತಾನು ಯಾಕೆ ಅಡ್ಡ ಬರಲಿ ಎಂದು ಸುಮ್ಮನಿದ್ದರು. ಆದರೆ ಆಕೆ ಹಾಗೆ ನೆನೆಸಿಕೊಂಡು ‘ಇಷ್ಟೆಲ್ಲ ನೋಡಿಯೂ ಮಗ ಸುಮ್ಮನಿದ್ದ' ಎಂದಾಗ ಮಾತ್ರ ಇವರಿಗೂ ಕಣ್ಣು ತೇವವಾಗಿತ್ತು.

***

ದೂರದಲ್ಲಿ ಯಾರೋ ಬರುತ್ತಿರುವುದನ್ನು ಕಂಡ ವೆಂಕಪ್ಪಯ್ಯನ ಕಣ್ಣುಗಳು ಚುರುಕಾದವು. ಮಣ್ಣು ಮೆತ್ತಿದ ಕೈಯ್ಯನ್ನೇ ಹಣೆಗಿಟ್ಟುಕೊಂಡು ನೋಡಿದರೂ ಸ್ಪಷ್ಟವಾಗಿ ಕಾಣಿಸದು. ಅದು ಬೇರೆ ಬರುತ್ತಿರುವುದು ಒಬ್ಬರೇ ಎಂದಾದಾಗ ಮಗನಿರಲಿಕ್ಕಿಲ್ಲವೆಂದು ಎಣಿಸಿದರು. ಅವನಾಗಿದ್ದರೆ ಖಂಡಿತ ತಾಯಿಯೂ ಜೊತೆಗಿರಬೇಕಿತ್ತಲ್ಲ ಎಂದುಕೊಳ್ಳುತ್ತಿರುವಾಗಲೇ ಅವ ಹತ್ತಿರ ಬಂದಾಗಿತ್ತು. ನೋಡಿದರೆ ಮಗನೇ. ಅದೂ ಒಬ್ಬನೇ. ಅವಳಿಗೇನಾದರೂ ಆಯ್ತೇ. ಭೂತವೆಲ್ಲ ಮರುಕಳಿಸಿ ಭಯ ಹೆಪ್ಪುಗಟ್ಟುವುದರೊಳಗೆ ಮಗ ಅಂಗಳಕ್ಕೆ ಕಾಲಿಟ್ಟಿದ್ದ. ಮಗನ ಮುಖದಮೇಲೆ ಅಂತಹ ಹೆದರಿಕೆಯ ಛಾಯೆಯೇನೂ ಕಾಣಿಸದಿದ್ದರೂ ಅವ ತುಸು ಕಸಿವಿಸಿಗೊಂಡಿದ್ದಂತೆ ಕಂಡಿತು. `ಏನು ಅಮ್ಮ



ಬರಲಿಲ್ಲವಾ' ತನ್ನ ಆತಂಕವನ್ನು ಮುಚ್ಚಿಡಲು ಪ್ರಯತ್ನಿಸುತ್ತಾ ವೆಂಕಪ್ಪಯ್ಯ ಕೇಳಿದರು. ಕೂಡಲೇ ಮಗ ದೂರುವವನಂತೆ ‘ನನಗೂ ಸಾಕಾಗಿ ಹೋಯ್ತು ಪದೇ ಪದೇ ಇಲ್ಲಿಗೆ ಬಂದು. ಅಮ್ಮನ ರಗಳೆಯೂ... ಅವಳದ್ದು ಹೊಂದಿಕೊಳ್ಳುವ ಗುಣವೇ ಅಲ್ಲ. ನಿಮ್ಮದೂ ಅಷ್ಟೆ. ಇನ್ನೇನು ವಯಸ್ಸು ಬರುತ್ತದೆಯೇ. ಅದಕ್ಕಾಗಿಯೇ ನೋಡಿ. ಬೆಂಗಳೂರಿನಿಂದ ಒಂದೈವತ್ತು ಮೈಲಿ ದೂರದಲ್ಲಿ ನನ್ನ ಗೆಳೆಯನೇ ಒಂದು ವೃದ್ಧಾಶ್ರಮ ನಡೆಸುತ್ತಿದ್ದಾನೆ. ಅಮ್ಮನನ್ನು ಅಲ್ಲಿ ಬಿಟ್ಟು ಬಂದು ಆಗಲೇ ಹದಿನೈದು ದಿನಗಳ ಮೇಲಾದವು. ನೀವೂ ಹೊರಡಿ' ಎಂದು ಒಂದೇ ಉಸಿರಿಗೆ ಹೇಳಿದ್ದ.

ವೆಂಕಪ್ಪಯ್ಯ ಕಣ್ಣೆವೆ ಮುಚ್ಚದೆ ನೋಡುತ್ತಲೇ ಇದ್ದರು. ‘ಇವನೇ ಆ ಮಗನೆ...ಮೈ ಸುಡುವ ಜ್ವರದಲ್ಲಿ ಎದೆಗೊತ್ತಿಕೊಂಡು ಅಲುಗಾಡಿದರೆ ಎಲ್ಲಿ ಆಯಾಸವಾಗುತ್ತದೇನೋ ಎಂದು ಎರಡೂ ಕೈಗಳಲ್ಲಿ ಎತ್ತಿಕೊಂಡು ರಾತ್ರಿ ಹೊತ್ತು ಮೂರು ಮೈಲಿ ಹೋಗಿ ಮೂರು ಮೈಲಿ ಬಂದದ್ದು’ ಎಂದು. ಹಾಗೆ ತೆರೆದ ಕಣ್ಣುಗಳು ತೆರೆದೇ ಇದ್ದಂತೆ ಆ ಕೈಗಳು ಸ್ತಬ್ಧವಾಗಿದ್ದುವು. ಮಗ ಮಾತು ಮುಂದುವರಿಸುತ್ತಲೇ ಇದ್ದ. ಈ ಚಿಕ್ಕ ಜಾಗವನ್ನು ಅದೆಷ್ಟಕ್ಕೋ ಯಾರಿಗೋ ಮಾರುವುದರ ಬಗ್ಗೆ... ಬಂದ ದುಡ್ಡಿನಲ್ಲಿ ಈಗಿದ್ದ ಬೆಂಗಳೂರಿನ ಮನೆಯ ಮಹಡಿಯ ಮೇಲೆ ಬೆಳೆಯುತ್ತಿರುವ ತನ್ನ ಮಗನಿಗೊಂದು ಬೇರೆಯೇ ರೂಮು ಕಟ್ಟಿಸಿಕೊಡುವುದರ ಅಗತ್ಯದ ಬಗ್ಗೆ... ಅದರ ಡಿಸೈನಿನ ಬಗ್ಗೆ... ಬೆಂಗಳೂರಿನಲ್ಲಿ ಈಗ ಎಲ್ಲವೂ ತುಟ್ಟಿಯಾದುದರ ಬಗ್ಗೆ ಹೀಗೆ ಇನ್ನೂ ಏನೇನೋ..